ದೊಡ್ಡಬಳ್ಳಾಪುರ ತಾಲ್ಲೂಕು-ಮಧುರೆ ಹೋಬಳಿ

1) ಕಾಡನೂರು ಕಾಲೋನಿ 2) ಗೆಜ್ಜಗದಹಳ್ಳಿ ಕಾಲೋನಿ. 3) ಮಲ್ಲೊಹಳ್ಳಿ ಕಾ. 4) ಮುಪ್ಪಡಿಗೆಟ್ಟ ಕಾ. 5) ಕಮ್ಮಸಂದ್ರ ಕಾ. 6) ಎಂ.ಜಿ. ರಾಮರಾವ್ ಕಾ. 7) ಕನ್ನಮಂಗಲ ಕಾ. 8) ವಡಗೆರೆ ಕಾ. 9) ಮಾರಸಂದ್ರ ಕಾ.

ಮಾಗಡಿ ತಾಲ್ಲೂಕು-ಸೋಲೂರು ಹೋಬಳಿ

1) ಜೆರೋಜಗರ್ 2) ಬುಡ್ಡಯ್ಯನಪಾಳ್ಯ 3) ಶ್ರೀನಿವಾಸನಗರ 4) ಗೋಡಿಗುಡ್ಡಪಾಳ್ಯ 5) ತಟ್ಟಕೆರೆ ಎ.ಕೆ. ಕಾಲೋನಿ 6) ಹರಸಿಣಕುಂಟೆ ಎ.ಕೆ.ಕಾ. 7) ಜಗನ್ನಾಥಪುರ ಕಾಲೋನಿ 8) ಕುರುಬರಪಾಳ್ಯ 9) ಉಮರಸಪಾಳ್ಯ 10) ಬೈಚಾಪುರ 11) ಓಬಳಯ್ಯಕುಲಿಪಾಳ್ಯ 12)ಲಕ್ಕೇನಹಳ್ಳಿ ಕಾ. 13)ತುಂಬರಪಾಳ್ಯ. 14)ದೊಡ್ಡಾರಯ್ಯನಪಾಳ್ಯ.

ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ

1) ಕಡಬಗೆರೆ ಜನತಾ ಕಾಲೋನಿ 2) ಆನಂದನಗರ ಜ.ಕಾ. 3) ಚಾಮುಂಡಿ ಜ.ಕಾ 4) ವಲ್ಲಬಾಯಿಪಟೇಲನಗರ 5) ಕೆ.ಜಿ. ಲಕ್ಕೇನಹಳ್ಳಿ ಜ.ಕಾ 6) ಮಾಡೋಹಳ್ಳಿ ಜ.ಕಾ 7) ಕಾಚೋಹಳ್ಳಿ ಜ.ಕಾ 8) ಕಮ್ಮಸಂದ್ರ ಜ.ಕಾ 8) ಕಮ್ಮಸಂದ್ರ ಜ.ಕಾ. 9) ಗಂಗೊಂಡನಹಳ್ಳಿ ಜ.ಕಾ. 10) ತೊರೆಗಾನಸಂದ್ರ ಜ.ಕಾ. 11) ವಡೇರಹಳ್ಳಿ ಜನತಾ ಕಾಲೋನಿ.

ಇ) ಹೌದು, 7 ಜನವಸತಿಗಳಲ್ಲಿ, 4 ಜನವಸತಿಗಳಿಗೆ ನೀರು ಸರಬರಾಜು ಯೋಜನೆಗಳು ಅನುಮೋದಿಸಲ್ಪಟ್ಟಿವೆ. ಬಾಕಿ ಯೋಜನೆಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳಲಾಗುತ್ತದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ 14 ಜನವಸತಿಗಳಲ್ಲಿ ವಿದ್ಯುದೀಕರಣ ಕೆಲಸವನ್ನು ತೆಗೆದುಕೊಂಡಿದೆ. ಮಿಕ್ಕ ಜನವಸತಿಗಳಲ್ಲಿ ಬೇಗನೇ ತೆಗೆದುಕೊಳ್ಳಲಾಗುವುದು.

ಕುಮದ್ವತಿ ನದಿಗೆ ಚಿಕ್ಕ ಮಾರನಹಳ್ಳಿ ಹತ್ತಿರ ಮೋರಿ ನಿರ್ಮಾಣ.

694 - ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಕ್ಷೇತ್ರದ ಕುಮದ್ವತಿ ನದಿಗೆ ಅಡ್ಡಲಾಗಿ ಹನುಮಂತೇಗೌಡನಪಾಳ್ಯ, ಮತ್ತು ಚಿಕ್ಕಮಾರನ ಹಳ್ಳಿ ಹತ್ತಿರ ಮೋರಿಯನ್ನು ನಿರ್ಮಾಣ ಮಾಡುವ ಉದ್ದೇಶವು ಸರ್ಕಾರದ ಗಮನದಲ್ಲಿದೆಯೇ?

ಆ) ಬೈರಸಂದ್ರದ ಹತ್ತಿರ ಕುಮದ್ವತಿ ನದಿಗೆ ಮೋರಿ ನಿರ್ಮಾಣ ಹಾಗೂ ತೊರೆಕೆಂಪನಹಳ್ಳಿ ಹತ್ತಿರ ಸೀಗೆಹಳ್ಳಕ್ಕೆ ಮೋರಿ ನಿರ್ಮಾಣದ ಬಗ್ಗೆ ಮನವಿಗಳು ಬಂದಿರುವುದು ನಿಜವೆ?

ಇ) ಮೇಲ್ಕಂಡ ನಾಲ್ಕು ಸ್ಥಳಗಳಲ್ಲಿ ಮೋರಿ ನಿರ್ಮಾಣವಿಲ್ಲದೆ ಸಾರ್ವಜನಿಕರು ಮತ್ತು ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ತಿಳಿದುಬಂದಿದೆಯೆ?

ಈ) ಹಾಗಿದ್ದಲ್ಲಿ, ಮೇಲ್ಕಂಡ ಸ್ಥಳಗಳಲ್ಲಿ ಮೋರಿಗಳನ್ನು ನಿರ್ಮಾಣ ಮಾಡುವ ಸಲುವಾಗಿ ಹೆಚ್ಚುವಾರಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಹೌದು.

ಅ) ನಿಜ.

ಇ) ಮಳೆಗಾಲದಲ್ಲಿ ತೊಂದರೆಯಾಗುವುದು ಕಂಡು ಬಂದಿದೆ.

ಈ) ಕೆಲಸಗಳ ಅದ್ಯತೆಗೆ ಅನುಸಾರವಾಗಿ 1993-94ರ ಆಯವ್ಯಯದಲ್ಲಿ ಸೇರಿಸುವ ಬಗ್ಗೆ ಪರಿಶೀಲಿಸಲಾಗುವುದು.

ರೋಜಗಾರ್ ಯೋಜನೆಯಡಿಯಲ್ಲಿ ಕೇಂದ್ರದಿಂದ ಬಂದ ಹಣದ ಪೊತ್ತ

636ಎ - ಶ್ರೀ ಪಿ.ಜಿ.ಆರ್. ಸಿಂಧ್ಯ, (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ರೋಜಗಾರ್ ಯೋಜನೆಯಡಿಯಲ್ಲಿ 1991-92ನೇ ಮತ್ತು 92-93ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಹಣವೆಷ್ಟು ? (ಜಿಲ್ಲಾವಾರು ವಿವರಗಳನ್ನು ನೀಡುವುದು)*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) 1991-92 ಮತ್ತು 1992-93ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರಕಾರಕ್ಕೆ ಬಂದಿರುವ ಹಣದ ವಿವರಗಳನ್ನು ತೋರಿಸುವ ತಖ್ತೆ "ಎ" ಮತ್ತು "ಬಿ" ಲಗತ್ತಿಸಿದೆ.

ANNEXURE-A

DISTRICTWISE CENTRAL RELEASES DURING 1991-92

(Rs. in lakhs)

Sl. No.	*District*	*Releases*
1.	Bangalore(U)	229.00
2.	Bangalore(R)	331.87
3.	Kolar	679.37
4.	Tumkur	667.08
5.	Chitradurga	476.30
6.	Shimoga	364.18
7.	Mysore	811.48
8.	Mandya	306.32
9.	Hassan	363.03
10.	Chickmagalur	252.00
11.	Kodagu	91.13
12.	Dakshina Kannada	341.13
13.	Belgaum	350.39
14.	Bijapur	633.48
15.	Dharwad	538.21